O.S.No. 22/2021 PW-1

ದಿನಾಂಕ : 12.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ರವರ ಶ್ರೀ ಸಿ.ಎಸ.ಎಚ್. ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ ಇರುತ್ತಾನೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. 1 ನೇ ಪ್ರತಿವಾದಿಯವರ ತಂದೆಗೆ ಪಾಲು ಇದೆ ಎಂದರೆ ಸರಿ.1 ನೇ ಪ್ರತಿವಾದಿಯವರ ತಂದೆ ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯವರ ತಂದೆಯವರು 4-ಜನ ಅಣ್ಣ-ತಮ್ಮಂದಿರು ಇರುತ್ತಾರೆ.

ಸರ್ವೆ ನಂ.120, 09 ಎಕರೆ-26 ಗುಂಟೆಯಲ್ಲಿ 1 ನೇ ಪ್ರತಿವಾದಿಯವರಿಗೆ ಸಮಪಾಲು ಇದೆ ಎಂದರೆ ಸರಿ.

**<u>ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿ ರವರ ಶ್ರೀ ಪಿ.ಬಿ.ಪಿ. ವಕೀಲರಿಂದಃ</u>**

ನನ್ನ ಅಜ್ಜ ಗುರಪ್ಪ ಸುಮಾರು ವರ್ಷಗಳ ಹಿಂದೆ ತೀರಿಕೊಂಡಿರುತ್ತೇವೆ, ಆಗ ನಾವು ಚಿಕ್ಕವರು ಇದ್ದೆವು, ನನ್ನ ತಂದೆ ಬಸಣ್ಣ ಈಗ 4 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಅಜ್ಜನ ಕಾಲಕ್ಕೆ ನನ್ನ ಅಜ್ಜನ ಮಕ್ಕಳಾದ ಬಸಣ್ಣ, ನಾಗಣ್ಣ, ಶರಣಪ್ಪ ಮತ್ತು ಅಣ್ಣಾರಾಯ ಇವರು ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ 120 ಇದು ಅಣ್ಣಾರಾಯ ರವರಿಗೆ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ ಬಂದಿ ಹೇಳಲು ಬರುವುದಿಲ್ಲಾ, ಸದರಿ ಆಸ್ತಿಯು ಈಗ 9 ಎಕರೆ-9 ಗುಂಟೆ ಇರುತ್ತದೆ. ನನ್ನ ಅಜ್ಜನ ಮಕ್ಕಳಾದ ಬಸಣ್ಣ 05 ಎಕರೆ, ನಾಗಣ್ಣ 05 ಎಕರೆ, ಶರಣಪ್ಪ 05 ಎಕರೆ ಮತ್ತು ಅಣ್ಣಾರಾಯ 05 ಎಕರೆ ಜಮೀನು ಬಂದಿರುತ್ತದೆ.

ಬಸಣ್ಣನಿಗೆ ಬಂದ 05 ಎಕರೆ ಜಮೀನನ್ನು ಈ ದಾವೆಯಲ್ಲಿ ಬಂದಿಲ್ಲಾ ಎಂದರೆ ಸರಿ.ನನ್ನ ತಂದೆಗೆ ಬಂದ 05 ಎಕರೆ ಜಮೀನಿನ ಚೆಕ್ ಬಂದಿ ಹೇಳಲು ಬರುವುದಿಲ್ಲಾ, ನಾನು ಶಾಲೆ ಕಲೆತಿಲ್ಲಾ. ನನ್ನ ಅಜ್ಜನ ಕಾಲವಾಧಿಯಲ್ಲಿ 4-ಜನ ಮಕ್ಕಳಿಗೂ ಸಮವಾಗಿ ಪಾಲು ವಾಟ್ನಿಯಾಗಿದ್ದು, ಈಗ ಅಣ್ಣಾರಾಯ ರವರ ಆಸ್ತಿ ಕಬಳಿಸಲು ಸುಳ್ಳು ದಾವೆ ಹೂಡಿರುತ್ತವೇ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ನಂ.2 ರಿಂದ 5 ರವರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಮನವಿಯನ್ನು ಮಾಡಿರುತ್ತಾರೆ. ಸದರಿ ಮನವಿಯನ್ನು ಪುರಸ್ಕರಿಸಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಾಕಾಶ ನೀಡಿ, ಮುಂದೂಡಲಾಯಿತು) .

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ